(SRI K. HANUMANTHAIYA.)

Name of the hobli and village	*No. of houses completed*
II. Nidagal Hobli—	
1 Modde	.. 2
2 Mangalawada	.. 1
Total	.. 3
III. Nagalmadike Hobli—	
1 Bettadakelaginahalli	.. 1
2 Nagalmadike	.. 2
3 Gyadigunte	.. 1
Total	.. 4
IV. Y. N. Hoskote—	
1 Salanaikanahalli	.. 1
2 Nagalapura	.. 1
Total	.. 2

ABSTRACT.

For the year 1952-53.

1 Kasaba Hobli	.. 4
2 Nidagal Hobli	.. 3
3 Nagalmadike Hobli	.. 4
4 Y. N. Hoskote Hobli	.. 3
Total	.. 13

ಶ್ರೀ ಸಿ. ಟಿ. ಹನುಮಂತಯ್ಯ.—ಪಾವಗಡ ತಾಲ್ಲೂಕು ಕೊಂಡೆತಿಮ್ಮನಹಳ್ಳಿಯಿಂದ ಮನೆ ಕಟ್ಟಿಸಿ ಕೊಡುವ ಬಗ್ಗೆ ಎಷ್ಟು ಅರ್ಜಿಗಳು ಬಂದುವು ?

ಶ್ರೀ ಕೆ. ಹನುಮಂತಯ್ಯ.—ಉತ್ತರದಲ್ಲೇ ಆ ವಿಷಯಗಳನ್ನೆಲ್ಲಾ ವಿವರವಾಗಿ ಕೊಟ್ಟಿದ್ದೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಇಲ್ಲಿ ಕೊಟ್ಟಿರುವ ಪರಿಶಿಷ್ಟದಲ್ಲಿ ಕೊಂಡೆತಿಮ್ಮನಹಳ್ಳಿಯ ಹೆಸರನ್ನು ಬಿಟ್ಟು ಬಿಟ್ಟಿದ್ದೀರಲ್ಲಾ !

ಶ್ರೀ ಕೆ. ಹನುಮಂತಯ್ಯ.—ಬಿಟ್ಟಿದ್ದರೆ ಸೇರಿಸೋಣ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—1952-53ನೆಯ ಇಸವಿಯಲ್ಲಿ ಈ ರೀತಿ ಮನೆಗಳನ್ನು ಕಟ್ಟುವುದಕ್ಕಾಗಿ ಒದಗಿಸಿರುವ ಪೊಬಲಗಿನಲ್ಲಿ ಖರ್ಚಾಗದೆ ಉಳಿದಿರುವ ಹಣವನ್ನು ಲ್ಯಾಪ್ಸ್ ಮಾಡದೆ ಮುಂದಿನ ವರ್ಷ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

Sri K. HANUMANTHAIYA.—In fact, that was the decision taken in the Policy Committee that whatever amount lapses must be converted into a Scheduled Castes' fund; that decision was taken about 20 days back.

ಶ್ರೀ ಎಸ್. ಸಿದ್ದಪ್ಪ.—ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕಾಗಿ ತಾಲ್ಲೂಕುವಾರಾಗಿ ಪ್ರತಿ ವರ್ಷವೂ ಹಣವನ್ನು ಒದಗಿಸಿ ಉತ್ತರೋತ್ತರವಾಗಿ ಅದರಿಂದ 40-50 ಮನೆಗಳನ್ನು ಕಟ್ಟುವುದಕ್ಕೆ ಕೊಡಲು ಅವಕಾಶವಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಅವಕಾಶವಿದೆ.

ಶ್ರೀ ಎಸ್. ಸಿದ್ದಪ್ಪ.—ಇದರಿಂದಾಗಿ ಒಂದೊಂದು ಊರಾಗಿ ಪೂರ್ತಿ ಮಾಡುವುದಕ್ಕೆ ಅವಕಾಶವಾಗುವುದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಆಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಆ ರೀತಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಈಗಲೂ ಮಾಡುತ್ತಿದ್ದೇವೆ.

Power Supply in Hiriyur, Chitaldrug and Challakere Taluks.

Q.—201. Sri MULKA GOVINDA REDDY (Chitaldrug).—

Will the Government be pleased to state :—

(*a*) when the applications for supply of power for irrigation for the following places in Hiriyur, Chitaldrug and Challakere Taluks were received;

(Ujamdal, Gollahalli, Eraballi, Mallappanahalli, Gannayakanahalli, Banelloratti, Sondekere, Godabanal, Sandekola, Bangarakkanahalli, Doddaghatta, Nerenal and Doddaullarthi).

(*b*) when the estimates were prepared for each of the said villages;

(*c*) how many have been sanctioned;

(*d*) when will they sanction power supply for the remaining villages ?

A.—Sri K. HANUMANTHAIYA (Chief Minister).—

(*a*)—

Name of village	*Date of receipt of applications*
Yamdal	.. 6th November 1952
Gollarahalli	.. Representation received in October 1952.
Erabahalli	..
Mallappanahalli	No representation so far.

Name of village	*Date of receipt of applications*
Gannayakana-halli	9th November 1952
Benelloratti	5th March 1953
Sondekere	December 1952
Godabanal	November 1952
Sondekola	December 1952
Bangarakkana-halli	15th December 1952
Dodagatta	1st November 1952
Nerenal	December 1952
Doddaullarthi	December 1952

(*b*)—

Name of village	*Date of preparation of estimate*
Yamdal	December 1952
Gannayakana-halli	December 1952
Godabanal	December 1952
Bangarakkana-halli	March 1953
Dodagatta	November 1952
Nerenal	February 1953

For the other villages (7) no estimates have yet been prepared.

(*c*) None.

(*d*) In the case of remaining villages, deposits have been called for from the applicants and it is only on receipt of these deposits, the survey work and preparation of estimates will be taken up and if after the preparation of these estimates, the schemes are found to cost Rs. 1,000 or less per H.P., it would be possible to sanction the concerned estimates. As such, no definite date regarding sanction of power could be given at this stage.

ಶ್ರೀ ಮುಲ್ಕ ಗೋವಿಂದರೆಡ್ಡಿ.—(ಎ) ಮತ್ತು (ಬಿ) ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರದಲ್ಲಿ ತಿಳಿಸಿರುವಂತೆ ಕೆಲವು ಹಳ್ಳಿಗಳ ವಿಷಯದಲ್ಲಿ ಜಾಗ್ರತೆ ಎಸ್ಟಿಮೇಟ್ ಮಾಡಿರುವುದಕ್ಕೂ ಇನ್ನು ಕೆಲವು ಹಳ್ಳಿಗಳ ವಿಷಯದಲ್ಲಿ ಎಸ್ಟಿಮೇಟ್ ತಯಾರಿಸುವುದರಲ್ಲಿ ನಿಧಾನ ಮಾಡಿರುವುದಕ್ಕೂ ಕಾರಣವೇನು ?

*ಶ್ರೀ ಕೆ. ಹನುಮಂತಯ್ಯ.—ಒಂದಕ್ಕೊಂದಕ್ಕೂ ಸ್ವಲ್ಪ ಮಟ್ಟಿಗೆ 15-20 ದಿವಸಗಳಷ್ಟು ವ್ಯತ್ಯಾಸ ವಾಗಿದೆ ಅಷ್ಟೆ. ಬೇಗ ಮಾಡುತ್ತಿದ್ದಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಎಸ್ಟಿಮೇಟ್ ಆಗಿದೆಯೆಂದು (a) ನಲ್ಲಿ ಹೇಳಿದ್ದೀರಲ್ಲ, ಅವೆಲ್ಲಾ ಮಂಜೂರಾಗಿವೆಯೇ ?

ಶ್ರೀ ಕೆ. ಹನುಮಂತಯ್ಯ.— Scrutiny ಯಲ್ಲಿವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇನ್ನೂ ಉಳಿದಿರ ತಕ್ಕ ಗ್ರಾಮಗಳ ವಿಷಯದಲ್ಲಿ ಎಸ್ಟಿಮೇಟ್ ರೈತರು ಡಿಪಾಜಿಟ್ ಕೊಡಬೇಕೆಂದು ಹೇಳಿದ್ದೀರಿ. ಈ ರೀತಿ ಮಾಡಿದರೆ ರೈತರು ಯಾರೂ ಮುಂದೆ ಬರುವುದಿಲ್ಲ. ಎಸ್ಟಿಮೇಟ್ ಮಾಡಿಸಿ ಎಂದು ಯಾರೂ ರೈತರು ಬಂದು ಕೇಳುವುದಿಲ್ಲ.

ಶ್ರೀ ಕೆ. ಹನುಮಂತಯ್ಯ.—ಅದು ಅಭಿಪ್ರಾಯದ ಮಾತು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಭಿಪ್ರಾಯದ ಮಾತಲ್ಲ ; ತಿನ್ನುವುದಕ್ಕೇ ಆಹಾರವಿಲ್ಲದೆ ಇದ್ದಮೇಲೆ ಇನ್ನು ಪಂಪಿನ ಯೋಜನೆ ಅವರಿಗೇಕೆ ?

(No answer.)

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೊನ್ನೆ ಆಹಾರ ಮಂತ್ರಿಗಳು ಮಾತನಾಡುತ್ತಾ, ಈ ರೀತಿ 100 ರೂಪಾಯಿಗಳ ಡಿಪಾಜಿಟ್ ಕೇಳುವುದನ್ನು ನಿಲ್ಲಿಸುತ್ತೇವೆಂದು ಹೇಳಿದ್ದು ತಮಗೆ ಜ್ಞಾಪಕದಲ್ಲಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—Examine ಮಾಡುತ್ತೇನೆಂದು ಹೇಳಿದೆ, ಅಷ್ಟೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗೆ 100 ರೂಪಾಯಿಗಳನ್ನು ಡಿಪಾಜಿಟ್ ಕೊಡಬೇಕೆಂಬ ಪದ್ಧತಿಯನ್ನು ಯಾವಾಗ ಜಾರಿಗೆ ತಂದಿರಿ ?

Sri K. HANUMANTHAIYA.—I want notice to give the exact date.

ಶ್ರೀ ಮುಲ್ಕ ಗೋವಿಂದರೆಡ್ಡಿ.—ನೂರು ರೂಪಾಯಿಗಳನ್ನು ಕೊಡಬೇಕೆಂದು ಏಕೆ ಕೇಳುತ್ತಿದ್ದೀರಿ ?

ಶ್ರೀ ಕೆ. ಹನುಮಂತಯ್ಯ.—ಅನೇಕರು ಅರ್ಜಿಹಾಕಿದರೂ, ಎಸ್ಟಿಮೇಟ್ ಹಾಕಿಸಿ, ಆಮೇಲೆ ಪವರ್ ತೆಗೆದುಕೊಳ್ಳುತ್ತೀರಾ ಎಂದು ಕೇಳಿದರೆ ಉತ್ತರವನ್ನೇ ಕೊಡುವುದಿಲ್ಲ. ಆದ್ದರಿಂದ ಯಾರು ಅರ್ಜಿ ಹಾಕುತ್ತಾರೆಯೋ ಅವರು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಕೇಳುತ್ತಾರೆಯೇ ಇಲ್ಲವೇ ಎಂಬುದನ್ನು ದೃಢಪಡಿಸಿಕೊಳ್ಳುವುದಕ್ಕಾಗಿ ಈ ರೀತಿ ಕೇಳುತ್ತಿದ್ದೇವೆ. ಹೀಗೆ ಅವರು ಡಿಪಾಜಿಟ್ ಕೊಟ್ಟ ಮಾತ್ರಕ್ಕೇ ಅದು ಎಲ್ಲೂ ಹೋಗುವುದಿಲ್ಲ. ಮುಂದೆ ಅವರಿಗೇ ವಾಪಸು ಕೊಡುತ್ತಾರೆ. ಆದ್ದರಿಂದ ರೈತರಿಗೆ ಯಾವ ರೀತಿಯಲ್ಲೂ ತೊಂದರೆಯಾಗುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗ ಕೆಲವು ಹಳ್ಳಿಗಳಿಗೆ ಪಂಪು ಸ್ಯಾಂಕ್ಷನ್ ಆಗಿದ್ದೂ ಕೂಡ ಹಣದ ಅಭಾವದಿಂದ ಅವರು ತೆಗೆದುಕೊಳ್ಳುವುದಕ್ಕಾಗದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಮೊನ್ನೆಯ ದಿವಸ ತಾವೇ ಹೇಳಿದಿರಿ, ಈ ಮೂರು ಕೋಟಿ ರೂಪಾಯಿಗಳ ಸಾಲದ ಹಣವನ್ನೂ ಹಳ್ಳಗಳಿಂದಲೇ collect ಮಾಡಿ ಎಂದು ಹೇಳಿದರಲ್ಲ ! ಹಾಗಾದರೆ ಅಲ್ಲಿ ಹಣದ ಅಭಾವ ಎಲ್ಲಿದೆ ?

ಅಧ್ಯಕ್ಷರು.—ಈ ಹಣ ಸಿ. ಆರ್. ಬಿ. ಗೆ ಅಪ್ಲಿಕೇಷನ್ ಹಾಕುವಾಗ ಒಂದು ಫೀಸ್ ಕೊಡುವಂತಿದೆ, ಅಷ್ಟೆ.

ಶ್ರೀ ಕೆ. ಹನುಮಂತಯ್ಯ.—ಹಾಗೂ ಅಲ್ಲ ; ಸಿ. ಆರ್. ಬಿ.ಗೆ ಕೊಟ್ಟಿದ್ದು ಹೊರಟು ಹೋಗುತ್ತದೆ; ಇದು ಹೋಗುವುದಿಲ್ಲ ; ವಾಪಸು ಕೊಡುತ್ತೇವೆ.